**ಸಾಕ್ಷಿಯನ್ನು ದಿನಾಂಕಃ 22.04.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಟಿ ಎಂ ಎಸ್ ವಕೀಲರಿಂದ:**

ವಾದಿ ಮನೆ ಖರೀದಿ ಮಾಡುವ ಮೊದಲು ನಾನು ಸದರಿ ಆಸ್ತಿಯನ್ನು ನೋಡಿದ್ದೆ. ಸದರಿ ಮನೆಗೆ ಉತ್ತರದ ಕಡೆಗೆ ಮಾತ್ರ ಗಲ್ಲಿ ಬಿಟ್ಟಿದ್ದರು. ಸದರಿ ಮನೆಯನ್ನು ಪಶ್ಚಿಮದ ರಸ್ತೆಯಿಂದ ಎಷ್ಟು ಅಡಿ ಬಿಟ್ಟು ಕಟ್ಟಿದ್ದರು ಎಂದು ನಾನು ನೋಡಿರುವುದಿಲ್ಲ. ಸದರಿ ಮನೆಯನ್ನು ರಸ್ತೆಯಿಂದ ಸ್ವಲ್ಪ ಜಾಗ ಬಿಟ್ಟು ಕಟ್ಟಿದ್ದರು. ಸದರಿ ಮನೆಯನ್ನು ದಕ್ಷಿಣದ ಕಡೆಗೆ ರಸ್ತೆಯಿಂದ ಎಷ್ಟು ಅಡಿ ಬಿಟ್ಟು ಕಟ್ಟಿದ್ದರು ಎಂದು ನಾನು ನೋಡಿರುವುದಿಲ್ಲ. ಸದರಿ ಮನೆಯನ್ನು ರಸ್ತೆಯಿಂದ ಸ್ವಲ್ಪ ಜಾಗ ಬಿಟ್ಟು ಕಟ್ಟಿದ್ದರು. ದಕ್ಷಿಣದ ರಸ್ತೆ ಎಷ್ಟು ಅಡಿ ಇದೆ ಎಂದು ನನಗೆ ಗೊತ್ತಿಲ್ಲ. ಪಶ್ಚಿಮದ ರಸ್ತೆ ಎಷ್ಟು ಅಡಿ ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು, ಕಾರು ಹೋಗಬಹುದು ಎಂದು ನುಡಿಯುತ್ತಾರೆ. ನಾನು ಹೇಳುವ ವಾದಿಯ ಮನೆ ಇರುವ ಜಾಗ ಲೇಔಟ್ ಪ್ಲಾನ್ ಆಗಿರುವುದಿಲ್ಲ.

2. ಪ್ರತಿವಾದಿಯ ಮನೆ ತಾರ್ಸಿ ಮನೆ ಎಂದರೆ ಸರಿ. ಸದರಿ ಮನೆ ನಾನು ನೋಡಿದಂತೆ 15 ವರ್ಷಗಳಿಂದ ಇದೆ. ಸದರಿ ಮನೆ ಪೂರ್ವ ಪಶ್ಚಿಮಾಭಿಮುಖವಾಗಿ ಉದ್ದಕ್ಕೆ ಇರುತ್ತದೆ. ಸದರಿ ಮನೆ ಪೂರ್ವ ಪಶ್ಚಿಮಕ್ಕೆ ಎಷ್ಟು ಅಡಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ತಾರ್ಸಿ ಮನೆಯ ದಕ್ಷಿಣಕ್ಕೆ ಪ್ರತಿವಾದಿಯ ಹೆಂಚಿನ ಮನೆ ಇರುತ್ತದೆ. ವಾದಿಯ ಉತ್ತರದ ಕಡೆಗೆ ಪ್ರತಿವಾದಿಯ ತಾರ್ಸಿ ಮನೆ ಬರುತ್ತದೆ. ಪ್ರತಿವಾದಿಯ ತಾರ್ಸಿ ಮನೆಯ ಉತ್ತರಕ್ಕೆ ಪ್ರತಿವಾದಿಯ ಹೆಂಚಿನ ಮನೆ ಇರುತ್ತದೆ. ಸದರಿ ತಾರ್ಸಿ ಮತ್ತು ಹೆಂಚಿನ ಮನೆ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿ. ಪ್ರತಿವಾದಿ ಹೊಸದಾಗಿ ಮನೆ ಕಟ್ಟಿಲ್ಲ ಎಂದರೆ ಸರಿ. ಪ್ರತಿವಾದಿಯ ತಾರ್ಸಿ ಮನೆ ಕೊನೆಯವರೆಗೆ ಪೂರ್ವದಿಂದ ಪಶ್ಚಿಮದವರೆಗೆ ಅವರ ಅಳತೆಗೆ ಇರುತ್ತದೆ ಎಂದರೆ ಸರಿ.

3. ನಿಪಿ.21ರಲ್ಲಿ ಕಾಣುವ ಕಲ್ಲು ಪ್ರತಿವಾದಿಯ ಮನೆಯ ಗೋಡೆಗೆ ಹೊಂದಿಕೊಂಡಂತೆ ಇರುವ ಕಲ್ಲು ಎಂದರೆ ಸರಿ. ಸದರಿ ಕಲ್ಲನ್ನು ಕೀಳಲು ಹೋದಾಗ ಪ್ರತಿವಾದಿ ಪ್ರಶ್ನೆ ಮಾಡಿದ್ದರು ಎಂದರೆ ಸರಿ. ಸದರಿ ಕಲ್ಲು ಭೂಮಿಯಲ್ಲಿ ಆಳಕ್ಕೆ ಇದೆ ಎಂದರೆ ಸಾಕ್ಷಿಯು ಸುಮಾರಾಗಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಕಲ್ಲು 6 ಅಡಿ ಇರುತ್ತದೆ. ಸದರಿ ಕಲ್ಲನ್ನು ಹಾಕುವಾಗ 3 ಅಡಿ ಆಳಕ್ಕೆ ಹಾಕಲಾಗಿತ್ತು. ಸದರಿ ಕಲ್ಲನ್ನು ವಾದಿ ಖರೀದಿ ಮಾಡಿದ ಮೇಲೆ ನಾನೇ ನೆಟ್ಟಿದ್ದೆ. ಸದರಿ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಸದರಿ ಕಲ್ಲನ್ನು ವಾದಿ ಜೆಸಿಬಿ ಸಹಾಯದಿಂದ ತೆಗೆಯಲು ಹೋಗಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು , ಆಗ ಗಲಾಟೆಯಾಗಿತ್ತು ಎಂದು ನುಡಿಯುತ್ತಾರೆ.

4. ವಾದಿ ಖರೀದಿ ಮಾಡಿದ ನಂತರ ನಾನು ಹೇಳುವಂತೆ ಯಾವುದೇ ಕಲ್ಲು ನೆಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಕ್ರಯಕ್ಕೆ ಕೊಟ್ಟವರ ಮೂಲಪುರುಷ ಎ.ತಮ್ಮಯ್ಯ ಮತ್ತು ಪ್ರತಿವಾದಿಯ ತಾತನ ಸಹೋದರರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ವಾದಿಯ ಮನೆಯನ್ನು ತೆಗೆಯುವ ಸಮಯದಲ್ಲಿ ನಾನು ಇದ್ದೆ. ಪ್ರತಿವಾದಿಯ ತಾರ್ಸಿ ಮನೆಗೆ ಹೊಂದಿಕೊಂಡಂತೆ ವಾದಿಗೆ ಕ್ರಯಕ್ಕೆ ಕೊಟ್ಟವರ ಮೂಲಪುರುಷ ಎ.ತಮ್ಮಯ್ಯನವರ ತಾರ್ಸಿ ಮನೆ ಇತ್ತು ಎಂದರೆ ಸಾಕ್ಷಿಯು ಹಳೇ ಹೆಂಚಿನ ಮನೆ ಇತ್ತು ಎಂದು ನುಡಿಯುತ್ತಾರೆ. ಎ.ತಮ್ಮಯ್ಯನವರ ಮನೆ 43x36 ವಿಸ್ತೀರ್ಣಕ್ಕೆ ಇತ್ತು. ಎ.ತಮ್ಮಯ್ಯನವರಿಗೆ ಪ್ರತಿವಾದಿಯ ಮನೆಗೆ ಹೊಂದಿಕೊಂಡಂತೆ ಆರ್ ಸಿ ಸಿ ಮನೆಗೆ ಹೊಂದಿಕೊಂಡಂತೆ ಹೆಂಚಿನ ಮನೆ ಎರಡು ಮನೆಗಳಿತ್ತು ಎಂದರೆ ಸರಿಯಲ್ಲ. ಸದರಿ ಆರ್ ಸಿ ಸಿ ಮನೆಯನ್ನು ವಾದಿ ಅವರ ಅಳತೆಗೆ ಸರಿಯಾಗಿ ಕತ್ತರಿ ಕೆಡವಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

5. ಎ.ತಮ್ಮಯ್ಯ ಮತ್ತು ಪ್ರತಿವಾದಿಯ ತಾತ ವಿಭಾಗ ಮಾಡಿಕೊಂಡಾಗ ಎರಡು ಮನೆಗಳ ನಡುವೆ ಕಲ್ಲು ಚಪ್ಪಡಿಗಳನ್ನು ನೆಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯ ತಾಯಿ ತನ್ನ ಜಾಗದಲ್ಲಿ ಕಲ್ಲು ಚಪ್ಪಡಿಗೆ ಹೊಂದಿಕೊಂಡಂತೆ ಇಟ್ಟಿಗೆಯಿಂದ ಗೋಡೆ ಕಟ್ಟಿಕೊಂಡಿದ್ದರು ಎಂದರೆ ಸರಿಯಲ್ಲ. ನನಗೆ ಈ ದಾವೇಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

6. ವಾದಿಯು ಹಳೆ ಮನೆ ಕೆಡಲು ಅನುಮತಿ ಪಡೆದಿದ್ದು, ಅದನ್ನು ನಾನು ನೋಡಿರುತ್ತೇನೆ. ಸದರಿ ಅನುಮತಿ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಅನುಮತಿಯಲ್ಲಿ ಏನು ಷರತ್ತು ಇತ್ತು ಎಂದು ನನಗೆ ಗೊತ್ತಿಲ್ಲ.

7. ವಾದಿಯ ತಂದೆ ವ್ಯವಸಾಯ ಮಾಡುತ್ತಿದ್ದರು. ವಾದಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ಮದುವೆಯಾಗಿದೆ. ವಾದಿ ಬಡ್ಡಿ ವ್ಯವಹಾರ ಮಾಡುತ್ತಿದ್ದು, ಅವರಿಂದ ನಾನು ಹಣ ಪಡೆದ ಕಾರಣ, ಅವರು ಹೇಳಿಕೊಟ್ಟಂತೆ ನಾನು ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ: ಇಲ್ಲ</u>

**O.S.No.207/2019**
**P.W-4**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.